**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ**
**ನ್ಯಾಯಾಲಯ, ಕನಕಪುರ**

**<u>ಸಿ.ಸಿ ನಂ. 1204/2020</u>**

ದಿನಾಂಕಃ. **18.02.2026.** ರಂದು ಸಾಕ್ಷಿಗೆ ಸಂಜೆ **5.30** ಗಂಟೆಗೆ ಪ್ರಮಾಣ ವಚನ ಭೋದಿಸಲಾಯಿತು.

| ಚಾಸಾ-**15** | ಪ್ರಾಸಾ-**15** |
|---|---|
| ಹೆಸರು | - ರಾಜಶೇಖರ್ |
| ತಂದೆ ಹೆಸರು | - ಲೇಟ್ ಹುಚ್ಚಯ್ಯ |
| ವಯಸ್ಸು | - **64** |
| ಉದ್ಯೋಗ | - ನಿವೃತ್ತ ಪಿ.ಎಸ್.ಐ |
| ವಿಳಾಸ | - ಹಾರೋಹಳ್ಳಿ |

**<u>ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-</u>**

**2016** ರಿಂದ **2022** ರವರೆಗೆ ಸಾತನೂರು ಪೋಲಿಸ್ ಠಾಣೆಯ ಪಿ.ಎಸ್,ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ **10.01.2019** ರಂದು ಸಂಜೆ **7-30** ಗಂಟೆಗೆ ನಾನು ಠಾಣೆಯಲ್ಲಿ ಎಸ್ಹೆಚಓ ಕರ್ತವ್ಯದಲ್ಲಿದ್ದಾಗ ಚಾ.ಸಾ. **1** ರವರು ಬಂದು ಒಂದು ಲಿಖಿತ ದೂರನ್ನು ನೀಡಿದ್ದು ಅದನ್ನು ಸ್ವೀಕರಿಸಿಕೊಂಡು ಠಾಣಾ ಅಪರಾಧ ಸಂಖ್ಯೆಃ **9/2019** ಎಂದು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿ ಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದೆ.

ಸಾಕ್ಷಿ ಒಂದು ದೂರನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ಸದರಿ ದೂರು ಎಂದು ಗುರುತಿಸಿದ್ದು, ಸದರಿ ಈಗಾಗಲೇ **ದೂರನ್ನು** ನಿಪಿ-**1** ಎಂದು, ಸಾಕ್ಷಿ ಸಹಿಯನ್ನು ನಿಪಿ-**1(**ಎ**)** ಎಂದು ಗುರುತಿಸಲಾಯಿತು.

ಸಾಕ್ಷಿ ಒಂದು ಪ್ರಥಮ ವರ್ತಮಾನ ವರದಿಯನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ಸದರಿ ಪ್ರಥಮ ವರ್ತಮಾನ ವರದಿ ಯನ್ನು ಗುರುತಿಸಿದ್ದು, ಸದರಿ **ಪ್ರಥಮ ವರ್ತಮಾನ ವರದಿ ಯನ್ನು** ನಿಪಿ-**4** ಎಂದು, ಸಾಕ್ಷಿ ಸಹಿಯನ್ನು ನಿಪಿ-**4(**ಎ**)** ಎಂದು ಗುರುತಿಸಲಾಯಿತು.

ಮುಂದಿನ ತನಿಖೆಗಾಗಿ ಚಾ.ಸಾ. **16** ರವರಿಗೆ ಕೊಟ್ಟೆ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಸಿ.ಎಂ.ಜೆ. ವಕೀಲರಿಂದಃ</u>**

ಚಾ.ಸಾ. 1 ರವರು ಕೊಟ್ಟಿರುವ ಸುಳ್ಳು ದೂರಿಗೆ ಅನುಕೂಲವಾಗಲಿ ಎಂದು ಸುಳ್ಳು ಪ್ರಥಮ ವರ್ತಮಾನ ವರದಿ ಯನ್ನು ದಾಖಲಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾ,ಸಾ, **1** ರವರು ಪರಿಹಾರದ ಹಣವನ್ನು ಪಡೆಯಲು ಕೊಟ್ಟಿರುವ ಸುಳ್ಳು ದೂರನ್ನು ಸ್ವೀಕರಿಸಿಕೊಂಡು ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಸಂಜೆ **5.45** ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**